# ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ : ಪ್ರಾದೇಶಿಕ ತರಬೇತಿ ಕೇಂದ್ರ : ಹಾಸನ

ಕ.ರಾ.ರ.ಸಾ.ನಿಗಮವು 1950 ರ ರಾಜ್ಯ ರಸ್ತೆ ಸಾರಿಗೆ ನಿಗಮಗಳ ಕಾನೂನು ಅಧಿನಿಯಮ-3 ರ ಮೇರೆಗೆ ದಿ:01.08.1961 ರಂದು ಮೈಸೂರು ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ರಾಜ್ಯದ ಸಾರ್ವಜನಿಕರಿಗೆ ಸಕಾಲದಲ್ಲಿ ಸಮರ್ಪಕವಾದ ಸರಳ ರೀತಿಯ ಸಾರಿಗೆ ಸೌಲಭ್ಯವನ್ನು ಒದಗಿಸುವ ಉದ್ದೇಶದಿಂದ ಸ್ಥಾಪಿಸಲಾಯಿತು. ದಿ:01.11.1973 ರಂದು ರಾಜ್ಯದ ಹೆಸರು ಪುನರ್ ನಾಮಕರಣಗೊಂಡ ಹಿನ್ನೆಲೆಯಲ್ಲಿ ಕ.ರಾ.ರ.ಸಾ.ಸಂಸ್ಥೆ ಎಂದು ಹೆಸರಿಸಲಾಯಿತು.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಆಡಳಿತ ಸುಧಾರಣೆ ತರಲು ಮತ್ತು ಸಾರ್ವಜನಿಕರಿಗೆ ಹೆಚ್ಚಿನ ಸೇವೆ ಒದಗಿಸುವ ದೃಷ್ಠಿಯಿಂದ ಮಾನವ ಸಂಪತ್ತನ್ನು ಅಭಿವೃದ್ದಿಪಡಿಸುವ ಹಿನ್ನೆಲೆಯಲ್ಲಿ ಕೇಂದ್ರ ಕಛೇರಿ, ಬೆಂಗಳೂರಿನಲ್ಲಿ ಮಾನವ ಸಂಪನ್ಮೂಲ ಅಭಿವೃದ್ದಿ ಇಲಾಖೆಯನ್ನು 1985 ರಿಂದ ಆರಂಭಿಸಿ ಬೆಂಗಳೂರು, ಕೋಲಾರ, ಮೈಸೂರು, ಹಾಸನ, ಹುಮ್ನಾಬಾದ್, ಹರಪ್ಪನಹಳ್ಳಿ, ಹುಬ್ಬಳ್ಳಿ ಗಳಲ್ಲಿ ತರಬೇತಿ ಕೇಂದ್ರಗಳನ್ನು ಆರಂಭಿಸಲಾಯಿತು.

ಹಾಸನದಲ್ಲಿ ತರಬೇತಿ ಕೇಂದ್ರವನ್ನು ದಿ:22.10.1992 ರಂದು ಹಾಸನ ಘಟಕದ ಚಿಕ್ಕ ಕೊಠಡಿಯಲ್ಲಿ ಆರಂಭಿಸಲಾಯಿತು. ತರಬೇತಿ ಕೇಂದ್ರದ ವ್ಯಾಪ್ತಿಯನ್ನು ವಿಸ್ತರಿಸಿದ ನಂತರ ದಿ:27.11.1995 ರಂದು ಹಾಸನ ಬಸ್ ನಿಲ್ದಾಣದ ಮೊದಲ ಮಹಡಿಗೆ ತರಬೇತಿ ಕೇಂದ್ರವನ್ನು ಸ್ಥಳಾಂತರಿಸಲಾಯಿತು. ತರಬೇತಿ ಕೇಂದ್ರಕ್ಕೆ ಸುಸಜ್ಜಿತ ಕಟ್ಟಡವನ್ನು ಹೊಂದುವ ಸಲುವಾಗಿ ಹಾಸನ ನಗರದ ಡೈರಿ ವೃತ್ತದ, ರಿಂಗ್ ರಸ್ತೆಯ ಬಳಿ 62 ಎಕರೆ ಪ್ರದೇಶದಲ್ಲಿ ಸುಮಾರು ರೂ 5 ಕೋಟಿಗಳ ವೆಚ್ಚದಲ್ಲಿ ಸುಸಜ್ಜಿತ ಕಟ್ಟಡವನ್ನು ನಿರ್ಮಿಸಿ ಸನ್ಮಾನ್ಯ ಆರ್.ಅಶೋಕ್, ಸಾರಿಗೆ ಸಚಿವರು, ಕರ್ನಾಟಕ ಸರ್ಕಾರ. ರವರ ಹಸ್ತದಿಂದ ಲೋಕಾರ್ಪಣೆಗೊಂಡು, ದಿ:04.12.2008 ರಿಂದ ತರಬೇತಿ ಕೇಂದ್ರವನ್ನು ಕಾರ್ಯಾರಂಭಗೊಳಿಸಲಾಯಿತು.

ಪ್ರಸ್ತುತ ತರಬೇತಿ ಕೇಂದ್ರವು ಆಡಳಿತ ಕಟ್ಟಡ ಮತ್ತು ಹಾಸ್ಟೆಲ್ ಕಟ್ಟಡವನ್ನು ಹೊಂದಿದ್ದು, ಆಡಳಿತ ಕಟ್ಟಡದಲ್ಲಿ ಉಪನ್ಯಾಸ ಕೊಠಡಿ, ಸಿಮ್ಯುಲೇಟರ್ ಕೊಠಡಿ, ಪ್ರೊಜೆಕ್ಟರ್ ಕೊಠಡಿ, ಗ್ರಂಥಾಲಯ, ವಾಚನಾಲಯ, ಪ್ರಯೋಗಾಲಯ ಮತ್ತು ಯೋಗಕ್ಕಾಗಿ ಪ್ರತ್ಯೇಕ ಕೊಠಡಿಗಳಿರುತ್ತವೆ. ಹಾಗೂ ಹಾಸ್ಟೆಲ್ ಕಟ್ಟಡಲ್ಲಿ 100 ಸಿಬ್ಬಂದಿಗಳಿಗೆ ವಸತಿ ಸೌಲಭ್ಯಗಳನ್ನು ಕಲ್ಪಿಸಲಾಗಿದೆ.

ಹಾಸನ ತರಬೇತಿ ಕೇಂದ್ರದ ವ್ಯಾಪ್ತಿಗೆ ಹಾಸನ ವಿಭಾಗದ ವಿ.ಕಛೇರಿ, ಕಾರ್ಯಾಗಾರ & 06 ಘಟಕಗಳು, ಮಂಗಳೂರು ವಿಭಾಗದ ವಿ.ಕಛೇರಿ, ಕಾರ್ಯಾಗಾರ & 05 ಘಟಕಗಳು ಮತ್ತು ಪುತ್ತೂರು ವಿಭಾಗದ ವಿ.ಕಛೇರಿ, ಕಾರ್ಯಾಗಾರ & 05 ಘಟಕಗಳು ಹಾಗೂ ಪ್ರಾದೇಶಿಕ ಕಾರ್ಯಾಗಾರ, ಹಾಸನ. ಒಳಗೊಂಡಿದ್ದು, ಒಟ್ಟಾರೆ 03 ವಿಭಾಗ, 01 ಪ್ರಾದೇಶಿಕ ಕಾರ್ಯಾಗಾರ 16 ಘಟಕ ಗಳನ್ನು ಒಳಗೊಂಡಿದ್ದು, ಪ್ರತಿ ವರ್ಷ ಎಲ್ಲಾ ಹುದ್ದೆಗಳಿಗೂ ಸೇರಿ ಶೇ 20% ಸಿಬ್ಬಂದಿಗಳಿಗೆ ವಿವಿಧ ರೀತಿಯ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ.

ತರಬೇತಿ ಕೇಂದ್ರದ 05 ಎಕರೆ ಜಾಗದಲ್ಲಿ ಉದ್ಯಾನವನ ನಿರ್ಮಿಸಲಾಗಿದೆ. 05 ಎಕರೆ ಜಾಗದಲ್ಲಿ ತೇಗದ ಗಿಡಗಳನ್ನು ಬೆಳೆಸಲಾಗಿದೆ. ಇನ್ನುಳಿದ ಆವರಣದಲ್ಲಿ ಜೈವಿಕ ಇಂಧನ ಗಿಡಗಳಾದ ಬೇವು, ಹೊಂಗೆ, ಹಿಪ್ಪೆ ಗಿಡಗಳನ್ನು ನೆಟ್ಟು ಪೋಷಿಸಲಾಗುತ್ತಿದೆ. ಪ್ರತಿ ವರ್ಷ ಅರಣ್ಯೀಕರಣ ಯೋಜನೆಯಡಿ ಅರಣ್ಯ ಇಲಾಖೆಯ ಸಹಕಾರದಿಂದ ವಿವಿಧ ಹಣ್ಣಿನ ಗಿಡಗಳನ್ನು ನೆಡುವ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಬರಲಾಗುತ್ತಿದೆ. ತರಬೇತಿಗೆ ಆಗಮಿಸುವ ಶಿಬಿರಾರ್ಥಿಗಳಿಗೂ ಪರಿಸರ ಜಾಗೃತಿ ಮೂಡಿಸಿ ಶ್ರಮಧಾನದ ಮೂಲಕ ಗಿಡಗಳ ಆರೈಕೆಯನ್ನು ಮಾಡಲಾಗುತ್ತಿರುತ್ತದೆ.

-2-

ಕ.ರಾ.ರ.ಸಾ.ನಿಗಮಕ್ಕೆ ಚಾಲಕರು ಮತ್ತು ಚಾಲಕ–ಕಂ–ನಿರ್ವಾಹಕರನ್ನು ಆಯ್ಕೆ ಮಾಡಲು ರಾಷ್ಟ್ರಮಟ್ಟದಲ್ಲಿಯೇ ಉತ್ಕೃಷ್ಟವಾದ ಅತ್ಯಾಧುನಿಕ ಗಣಕೀಕೃತ ಚಾಲನಾ ಪಥವನ್ನು ಸುಮಾರು ರೂ 1.5 ಕೋಟಿಗಳ ವೆಚ್ಚದಲ್ಲಿ ನಿರ್ಮಿಸಲಾಗಿದೆ. ಇದರಲ್ಲಿ "ಎಸ್" "8" ಯು ಟರ್ನ್, ಅಪ್‌ಗ್ರೇಡಿಯಂಟ್, ಹಿಮ್ಮುಖ ಚಲನೆ ಇತ್ಯಾದಿಗಳ ಮೂಲಕ ಅಭ್ಯರ್ಥಿಗಳ ಚಾಲನಾ ಸಾಮರ್ಥ್ಯವನ್ನು ಪರೀಕ್ಷಿಸಬಹುದಾಗಿದೆ.

**ತರಬೇತಿಯ ಉದ್ದೇಶಗಳು :–**

- ಸಂಸ್ಥೆಯ ಸಿಬ್ಬಂದಿಗಳಲ್ಲಿ ಕಾರ್ಯ ನೈಪುಣ್ಯತೆ, ಕ್ಷಮತೆ ಹೆಚ್ಚಿಸುವುದು
- ಉತ್ಪಾದಕತೆಯನ್ನು ಹೆಚ್ಚಿಸುವುದು
- ಸಿಬ್ಬಂದಿಯ ಮನೋಪ್ರೌವೃತ್ತಿಯಲ್ಲಿ ಬದಲಾವಣೆ ತಂದು ಸಂಸ್ಥೆಯ ಕಾರ್ಯಾಚರಣೆಯಲ್ಲಿ ಪಾಲುಧಾರರನ್ನಾಗಿಸುವುದು.
- ಗ್ರಾಹಕರನ್ನು ಕೇಂದ್ರವನ್ನಾಗಿರಿಸಿಕೊಂಡು ಸೇವಾ ವ್ಯವಸ್ಥೆ/ಪದ್ಧತಿಗಳನ್ನು ಸುಧಾರಿಸುವುದು
- ಸಿಬ್ಬಂದಿಯ ವ್ಯಕ್ತಿತ್ವ ಸುಧಾರಣೆ ಹಾಗೂ ಜೀವನದ ಗುಣಮಟ್ಟವನ್ನು ಹೆಚ್ಚಿಸುವುದು
- ಸಂಸ್ಥೆಯ ಕಾರ್ಯಾಚರಣೆಯಲ್ಲಿ ವೃತ್ತಿಪರತೆಯನ್ನು ಅಳವಡಿಸುವುದು
- ಅಧಿಕಾರಿಗಳು ಮತ್ತು ಸಿಬ್ಬಂದಿಯು ತಂಡ ರೂಪದಲ್ಲಿ ಕಾರ್ಯ ನಿರ್ವಹಿಸಿ ಸಂಸ್ಥೆಯನ್ನು ಲಾಭದೆಡೆಗೆ ಕೊಂಡೊಯ್ಯುವುದು
- ಚಾಲನಾ ಕೌಶಲ್ಯ
- ಆಧುನಿಕ ತಾಂತ್ರಿಕತೆ, ಆವಿಷ್ಕಾರಗಳು, ಪದ್ಧತಿಯ ಬಗ್ಗೆ ಅರಿವು ಮೂಡಿಸುವುದು

ತರಬೇತಿ ಕಾರ್ಯಕ್ರಮದ ವಿವರಗಳು (ಕ್ರಿಯಾ ಯೋಜನೆಯಂತೆ)

| **ಕ್ರಮ ಸಂ** | **ಹುದ್ದೆ** | **ತರಬೇತಿ ವಿವರ** | **ದಿನಗಳು** |
|---|---|---|---|
| 1 | ಚಾಲಕರು | ಸುರಕ್ಷತಾ & ಇಂಧನ ಉಳಿತಾಯ | 03 |
| 2 | ಚಾಲಕರು | ಪುನಶ್ಚೇತನ | 03 |
| 3 | ನಿರ್ವಾಹಕರು | ಪುನಶ್ಚೇತನ | 03 |
| 4 | ಚಾ–ಕಂ–ನಿ | ಪುನಶ್ಚೇತನ | 03 |
| 5 | ತಾಂತ್ರಿಕ ಸಿಬ್ಬಂದಿ | ಪುನಶ್ಚೇತನ | 03 |
| 6 | ಆಡಳಿತ ಸಿಬ್ಬಂದಿ | ಪುನಶ್ಚೇತನ | 03 |
| 7 | ಮಹಿಳಾ ವಿಶೇಷ | ಪುನಶ್ಚೇತನ | 03 |
| 8 | ಮೇಲ್ವಿಚಾರಕ ಸಿಬ್ಬಂದಿ | ಪುನಶ್ಚೇತನ | 03 |
| 9 | ಭದ್ರತಾ ಸಿಬ್ಬಂದಿ | ಪುನಶ್ಚೇತನ | 03 |
| 10 | ಕ.ಸ & ಶುಚಿಗಾರ | ಪುನಶ್ಚೇತನ | 03 |
| 11 | ನೂತನ ನೇಮಕಾತಿ ಚಾಲಕ, ಚಾ/ನಿ ಪರಿಚಯ ಕಾರ್ಯಕ್ರಮ | – | 30 |
| 12 | ಪುನರ್ ನೇಮಕ/ಅ.ಕಂಪ | – | 06 |

ಮೇಲಿನ ತರಬೇತಿ ಕಾರ್ಯಕ್ರಮಗಳಲ್ಲದೆ ಭಾರತೀಯ ತೈಲ ನಿಗಮದ ಇಂಧನ ಉಳಿತಾಯ ತರಬೇತಿ ಕಾರ್ಯಕ್ರಮಗಳು, ಟಾಟಾ, ಲೇಲ್ಯಾಂಡ್ ಮತ್ತು ಐಷರ್ ಕಂಪನಿಯ ವಾಹನಗಳ ತಾಂತ್ರಿಕ ನೈಪುಣ್ಯತೆಯ ತರಬೇತಿಗಳು ಇತ್ಯಾದಿ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ಸಿಬ್ಬಂದಿಗಳಲ್ಲಿ ಕೌಶಲ್ಯವನ್ನು, ಕೆಲಸದ ಗುಣಮಟ್ಟವನ್ನು ಉತ್ತಮ ಪಡಿಸಲಾಗುತ್ತಿದೆ.

ಮೇಲಿನ ಸಂಸ್ಥೆಯ ಸಿಬ್ಬಂದಿಗಳಿಗಲ್ಲದೆ ವಿವಿಧ ಸರ್ಕಾರಿ ಯೋಜನೆಗಳಡಿ ನಿಯುಕ್ತಿಗೊಳ್ಳುವ ಅಭ್ಯರ್ಥಿಗಳಿಗೆ ಭಾರಿ ವಾಹನ ಚಾಲನಾ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಿ ಸರ್ಕಾರಿ ಯೋಜನೆಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸುವುದರ ಜೊತೆಗೆ ಸಂಸ್ಥೆಗೆ ಆದಾಯವನ್ನು ಕ್ರೂಢಿಕರಣ ಮಾಡಲಾಗುತ್ತಿರುತ್ತದೆ.

ವಿವಿಧ ಕೆಳಕಂಡ ಸರ್ಕಾರಿ ಯೋಜನೆಗಳಡಿ ಭಾರಿ, ಲಘು ವಾಹನ ತರಬೇತಿ & ವಿವಿಧ ತಾಂತ್ರಿಕ ವೃತ್ತಿಗಳಲ್ಲಿ ತರಬೇತಿ ನೀಡುವ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗಿರುತ್ತದೆ.

| **ಕ್ರಮ ಸಂ** | **ಸರ್ಕಾರಿ ಯೋಜನೆ ಹೆಸರು** |
|---|---|
| 1 | ಮಾನ್ಯ ಮುಖ್ಯ ಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆ |
| 2 | ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ |
| 3 | ಸಮಾಜ ಕಲ್ಯಾಣ ಇಲಾಖೆ |
| 4 | ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ |
| 5 | ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮ |

ಮೇಲ್ಕಂಡ ಎಲ್ಲಾ ಕ್ರಮಗಳಿಂದ ಸೇವಾ ಗುಣಮಟ್ಟದಲ್ಲಿ ಸುಧಾರಣೆಯನ್ನು ಸಾಧಿಸಿ ಕ.ರಾ.ರ.ಸಾ.ನಿಗಮವು ಒಂದು ವೃತ್ತಿಪರ ಸಾರಿಗೆ ಸಂಸ್ಥೆಯಾಗಿ ದೇಶದಲ್ಲಿ ಹೆಸರು ಮಾಡುವುದಲ್ಲದೆ ಜಾಗತಿಕ ಮಟ್ಟದಲ್ಲಿಯೂ ಸಹ ಸ್ಥಾನ ಪಡೆಯುವಲ್ಲಿ ಕಾರ್ಯ ನಿರತವಾಗಿದೆ.

**ಪ್ರಾಂಶುಪಾಲರು,**
**ಪ್ರಾತಕೇ : ಹಾಸನ**

## ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ : ಪ್ರಾದೇಶಿಕ ತರಬೇತಿ ಕೇಂದ್ರ : ಹಾಸನ

ನಿಗಮದ ಈ ತರಬೇತಿ ಕೇಂದ್ರಕ್ಕೆ ಪ್ರಾಂಶುಪಾಲರು ಮುಖ್ಯಸ್ಥರಾಗಿರುತ್ತಾರೆ ಹಾಗೂ ತರಬೇತಿ ಕೇಂದ್ರದಲ್ಲಿ ತರಬೇತಿಗೆ ಸಂಬಂದಿಸಿದ ಚಟುವಟಿಕೆಗಳ ಉಸ್ತುವಾರಿ ವಹಿಸಿರುತ್ತಾರೆ.

| ಕ್ರ ಸಂ | ಕಡತಗಳ ವಿವರ |
|---|---|
| 1 | ಆಡಳಿತ ಕಡತ |
| 2 | ತರಬೇತಿ ಕಾರ್ಯಕ್ರಮ ಕಡತ |
| 3 | ತರಬೇತಿ ಸಿಬ್ಬಂದಿ ವರದಿ, ಬಿಡುಗಡೆ ಕಡತ |
| 4 | ಕ್ರಿಯಾ ಯೋಜನೆ ಕಡತ |
| 5 | ಊಟೋಪಚಾರ ಕಡತ |
| 6 | ಟೆಂಡರ್ ಕಡತ |
| 7 | ಶಿಸ್ತು ಪಾಲನಾ ಕಡತ |
| 8 | ಚಾಲನಾ ಪಥದ ಕಡತ |
| 9 | ಡಾ॥ ಬಿ.ಆರ್.ಅಂಬೇಡ್ಕರ್ ನಿಗಮ ನಿಯಮಿತ ಕಡತ |
| 10 | ಮಹರ್ಷಿ ವಾಲ್ಮೀಕಿ ನಿಯಮಿತ |
| 11 | ಮಾನ್ಯ ಮುಖ್ಯ ಮಂತ್ರಿಗಳ ಕೌಶಲ್ಯ ತರಬೇತಿ ಕಡತ |
| 12 | ಮಾಹಿತಿ ಹಕ್ಕು ಅಧಿನಿಯಮ ಕಡತ |
| 13 | ಸಿಬ್ಬಂದಿ ವಿವರಣಾ ತಖ್ತೆ ಕಡತ |
| 14 | ತರಬೇತಿ ಕೇಂದ್ರ ಪರವಾನಗಿ ಕಡತ |
| 15 | ಕಛೇರಿ ಆದೇಶ ಕಡತ |
| 16 | ವಾಹನ ನಿರ್ವಹಣೆ ಕಡತ |
| 17 | ತರಬೇತಿ ಕೇಂದ್ರದ ಮಾಹಿತಿ ಕಡತ |
| 18 | ಸುತ್ತೋಲೆ ಕಡತ |
| 19 | ತರಬೇತಿ ಮಾಹಿತಿ ವಿವರದ ಕಡತ |
| 20 | ಕಾಮಗಾರಿ ಕಡತ |
| 21 | ಒಚರ್ ಕಡತ |
| 22 | ಹಾಜರಾತಿ ರಿಜಿಸ್ಟರ್ |
| 23 | ಹೊರ ನೊಂದಣಿ & ಒಳನೊಂದಣಿ ಕಡತ |
| 24 | ಆರ್.ಟಿ.ಒ ಶುಲ್ಕ ಪಾವತಿ ರಿಜಿಸ್ಟರ್ |
| 25 | ಸ್ಟಾಂಪ್ ರಿಜಿಸ್ಟರ್ |
| 26 | ಎನ್‌ವೆಂಟ್ರಿ ರಿಜಿಸ್ಟರ್ |
| 27 | ಗೌರವ ಧನ ಸಂಭಾವನೆ ರಿಜಿಸ್ಟರ್ |
| 28 | ಟಪಾಲು ಬಟಾವಾಡೆ ರಿಜಿಸ್ಟರ್ |
| 29 | ಸರ್ಕಾರಿ ಯೋಜಿತ ಕಾರ್ಯಕ್ರಮ ರಿಜಿಸ್ಟರ್ |
| 30 | ಭದ್ರತಾ ಶಾಖೆ ರಿಜಿಸ್ಟರ್ |

–ಸಹಿ–

ಪ್ರಾಂಶುಪಾಲರು,

ಪ್ರಾತಕೇ : ಹಾಸನ